ಮೂಲ ದಾವಾ ನಂಃ 98/2018
ಪಿ ಡಬ್ಲುಃ 1

ಸಾಕ್ಷಿಯನ್ನು ದಿನಾಂಕಃ **18-08-2023** ರಂದು ಕರೆಯಿಸಿ ಪ್ರಮಾಣ ವಚನ ಮಾಡಿಸಲಾಯಿತು.

**ಪಾಟೀ ಸವಾಲುಃಶ್ರೀ ಎಂ.ಎಂ.ಜೆ ವಕೀಲರಿಂದಃ**

ನಾನು ಬಿ.ಎ., ಬಿ.ಎಡ್ ವರೆಗೂ ವಿದ್ಯಾಭ್ಯಾಸವನ್ನು ಮಾಡಿದ್ದೇನೆ. ನನ್ನ ತಂದೆಯ ಹೆಸರು ಗಣೇಶ , ತಾಯಿಯ ಹೆಸರು ಪಾರ್ವತಿ. ನನ್ನ ಸಹೋದರನ ಹೆಸರು ಲಕ್ಷ್ಮೀನಾರಾಯಣ , ಸಹೋದರಿ ಸಾವಿತ್ರಿ. ನನ್ನ ಸಹೋದರಿಯ ಮದುವೆ ಆಗಿದೆ , ಆದರೆ ನನ್ನ ಮತ್ತು ನನ್ನ ಸಹೋದರನ ಮದುವೆ ಆಗಿರುವುದಿಲ್ಲ. ನನ್ನ ತಂದೆ ತಾಯಿ ಹಾಗೂ ನನ್ನ ಸಹೋದರ ಒಟ್ಟಿಗೆ ವಾಸವಾಗಿದ್ದಾರೆ. ನಾನೊಬ್ಬನೆ ಪ್ರತ್ಯೇಕವಾಗಿ ವಾಸವಾಗಿರುತ್ತೇನೆ. ನಾವು ದಾವೆಯನ್ನು ಹೂಡುವಾಗ ಸರ್ವೇ ನಂಬರ್ 458 ಹಿಸ್ಸಾ 2 ಬ ಎಂದು ದಾಖಲು ಮಾಡಿದ್ದೇವೆ. ಆ ನಂತರ ದಾವೆಯನ್ನು ದುರಸ್ಥಿ ಮಾಡಲು ಅರ್ಜಿಯನ್ನು ಕೊಟ್ಟು ನ್ಯಾಯಾಲಯದ ಅನುಮತಿಯನ್ನು ಪಡೆದು ಆ ನಂತರ ಸರ್ವೆ ನಂಬರ್ 456 ಹಿಸ್ಸಾ 2 ಬ ಎಂದು ತಿದ್ದುಪಡಿಯನ್ನು ಮಾಡಿರುತ್ತೇವೆ. ಸದ್ರಿ ಸರ್ವೇ ನಂಬರನ ಆಸ್ತಿಯು ನಮ್ಮ ಹಿಸ್ಸೆಗೆ ಬಂದಿದ್ದರ ಬಗ್ಗೆ ಹಿಸ್ಸಾ ದಸ್ತಾವೇಜನ್ನು ನ್ಯಾಯಾಲಯಕ್ಕೆ ಹಾಜರುಪಡಿಸಿದ್ದೇವೆ. ಈ ಪ್ರಕರಣವನ್ನು ಹೊರತುಪಡಿಸಿ ನಾನು ಹೊನ್ನಾವರ ನ್ಯಾಯಾಲಯದಲ್ಲಿ ಒಂದು ಕ್ರಿಮಿನಲ್ ಪ್ರಕರಣದಲ್ಲಿ ಹಾಜರಾಗುತ್ತಿದ್ದೇನೆ. ಈ ದಾವೆಯನ್ನು ಹೊರತುಪಡಿಸಿ ಬೇರೆ ಯಾವುದೇ ದಾವೆ ಈಗ ಬಾಕಿ ಇರುವುದಿಲ್ಲ. ಸದ್ರಿ ಸರ್ವೇ ನಂಬರನ ಪೂರ್ವ ದಿಕ್ಕಿಗೆ ಬೇಲಿ ಇದ್ದು ಆ ಬೇಲಿಯನ್ನು ದಾಟಿ ಸರ್ವೆ 455 ರ ಭಾಗಾಯತ ಸ್ಥಳ ಇರುತ್ತದೆ. ಸದ್ರಿ ಪೂರ್ವ ದಿಕ್ಕಿನ ಗಡಿಯು ಅಂದಾಜು 50 ಫೂಟ್ ಉದ್ದ ಇರಬಹುದು. ಸದರಿ ಸರ್ವೇ ನಂಬರನ ಪಶ್ಚಿಮ ಗಡಿಗೆ ಬೇಲಿ ಇದ್ದು , ಅದರ ಆಚೆಗೆ 457 ರ ಸರ್ವೇ ನಂಬರನ ಕ್ಷೇತ್ರ ಇದೆ. ದಾವಾ ಸ್ಥಳದ ಪೂರ್ವ ಗಡಿಗೆ ರಸ್ತೆ ಇರುತ್ತದೆ. ದಾವಾ ಸ್ಥಳದ ಪಶ್ಚಿಮ ಗಡಿಯು ಅಂದಾಜು 100 ಫೂಟ್ ಉದ್ದ ಇರಬಹುದು. ದಾವಾ ಸ್ಥಳದ ದಕ್ಷಿಣ ಬದಿಗೆ ಪಾಗಾರ ಮತ್ತು ಬೇಲಿ ಇದ್ದು, ಅದರ ದಕ್ಷಿಣ ದಿಕ್ಕಿಗೆ ಖಾಲಿ ಜಾಗ ಇದ್ದು ಅದು ಸರ್ವೇ ನಂಬರ್ 458 ಆಗಿರುತ್ತದೆ. ಸರ್ವೇ ನಂಬರ್ 458 ಹಾಗೂ ಸರ್ವೇ ನಂಬರ್ 456 ಹಿಸ್ಸಾ 2 ಬ ರ ನಡುವೆ ಮಳೆಗಾಲದಲ್ಲಿ ನೀರು ಹೋಗಲು ತೋಡು ಇದೆ. ಸದ್ರಿ ತೋಡು ಅಂದಾಜು 1 ರಿಂದ 2 ಫೂಟ್ ಅಗಲವಿರುಬಹುದು. ಅಲ್ಲಿ ನಮ್ಮ ದಾವಾ ಸ್ಥಳ ಮತ್ತು ಮಧ್ಯ ಇರುವ ತೋಡಿನಲ್ಲಿ ಯಾವುದೇ ವ್ಯತ್ಯಾಸ ಇಲ್ಲ ಆದರೆ ಅಲ್ಲಿ ನೀರು ಹರಿದು ಹೋಗುತ್ತದೆ. ಸದ್ರಿ ತೋಡು 1 ಫೂಟ್ ಆಳವಾಗಿದೆ, ಅಂದರೆ ದಾವಾ ಸ್ಥಳದ 1 ಫೂಟ್ ಆಳದಲ್ಲಿ ತೋಡು ಇದೆ. ಸರ್ವೇ ನಂಬರ್ 458 ಹಿಸ್ಸಾ 2 ರ ತೋಡಿನ ಉತ್ತರ ದಿಕ್ಕಿಗೆ ಏನು ಇರುವುದಿಲ್ಲ. ಸರ್ವೇ ನಂಬರ್ 405 ಹಿಸ್ಸಾ ಅ 1 ಇದು 1 ನೇ ಪ್ರತಿವಾದಿಗೆ ಸೇರಿದ ಸ್ಥಳವಾಗಿದೆ. ಸರ್ವೇ ನಂಬರ್ 458 ಹಿಸ್ಸಾ 2 ಅದು ಕೂಡ 1 ನೇ ಪ್ರತಿವಾದಿಗೆ ಸೇರಿದ ಸ್ಥಳವಾಗಿದೆ. ನಾವು ನಮ್ಮ ದಾವಾ ಸ್ಥಳದ ಚತುರ್ಗಡಿಯನ್ನು ನಿರ್ದಿಷ್ಟಪಡಿಸಿಕೊಳ್ಳಲು ಮೋಜಣಿ ಇಲಾಖೆಯವರಿಗೆ ಅರ್ಜಿಯನ್ನು ಸಲ್ಲಿಸಿದ್ದೇವೆ ಎಂದರೆ ಸರಿ. ಸದ್ರಿ ಮೋಜಣಿದಾರರು ಸ್ಥಳಕ್ಕೆ ಮೋಜಣಿ ಮಾಡಲು ಬಂದಾಗ ಎಲ್ಲ ಲಗ್ತದಾರರು ಹಾಜರಿದ್ದರು ಎಂದರೆ ಸರಿ. ಮೋಜಣಿದಾರರು ಬಂದಾಗ ಗಡಿಯನ್ನು ಗುರುತಿಸಿ ಕಲ್ಲನ್ನು ನಿರ್ದಿಷ್ಟಪಡಿಸಿ ಹೋಗಿರುತ್ತಾರೆ ಎಂದರೆ ಸರಿ. ಮೋಜಣಿದಾರರು ಮಾಡಿದ ಮೋಜಣಿಯು ಸರಿಯಾಗಿಲ್ಲ ಎಂದು ನಾನು ಅಪೀಲ್ ಹೋಗಿದ್ದೇನೆ ಎಂದರೆ ಸರಿ. ಸದ್ರಿ ಮೇಲ್ಮನವಿಯು ವಿಚಾರಣೆಯಲ್ಲಿ ಬಾಕಿ ಇದೆ ಅಥವಾ ನಿಖಾಲೆ ಯಾಗಿದೆ ಎಂಬುದರ ಬಗ್ಗೆ ನಾನು ನ್ಯಾಯಾಲಯದ ಮುಂದೆ ಯಾವುದೇ

ದಾಖಲೆಗಳನ್ನು ಹಾಜರುಪಡಿಸಿರುವುದಿಲ್ಲ. ಆ ದಾಖಲೆಗಳನ್ನು ಪಡೆಯಲು ನಾನು ಸಂಬಂಧಪಟ್ಟ ಇಲಾಖೆಗೆ ವಿಚಾರಣೆ ಮಾಡಿರುವುದಿಲ್ಲ. ನಾನು ಸದ್ರಿ ಇಲಾಖೆಯವರನ್ನು ಮೌಖಿಕವಾಗಿ ವಿಚಾರಣೆ ಮಾಡಿರುತ್ತೇನೆ.

(ಈ ಹಂತದಲ್ಲಿ ಮುಂದುವರೆದ ಪಾಟೀ ಸವಾಲಿಗೆ ವಕೀಲರು ಸಮಯ ಕೇಳಿದ್ದು ಸಮಯ ನೀಡಲಾಯಿತು.)

(ತೆರೆದ ನ್ಯಾಯಾಲಯದಲ್ಲಿ ನನ್ನ ಹೇಳಿಕೆಯಂತೆ ಗಣಕೀಕೃತಗೊಳಿಸಲಾಯಿತು.)

ಓ ಹೆ ಕೇ ಸರಿ ಇದೆ.

Sd/-

ಹೆಚ್ಚುವರಿ ಸಿವಿಲ್ ಜಡ್ಜ,ಹೊನ್ನಾವರ.